**ಎಂ ವಿ ಸಿ ಸಂಖ್ಯೆ - 367 / 2020**

**ಪಿಡಬ್ಲ್ಯೂ - 1**

**ದಿನಾಂಕಃ 17.12.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ನಿ.ಪಿ.1- ಪ್ರಥಮ ವರ್ತಮಾನ ವರದಿ

ನಿ.ಪಿ.2- ದೂರು

ನಿ.ಪಿ.3- ಸ್ಥಳ ಮಹಜರ್

ನಿ.ಪಿ.4- ನಕ್ಷೆ

ನಿ.ಪಿ.5- ಶವ ತನಿಖಾ ವರದಿ

ನಿ.ಪಿ.6- ಐ ಎಂ ವಿ ವರದಿ

ನಿ.ಪಿ.7- ಶವ ಪರೀಕ್ಷಾ ವರದಿ

ನಿ.ಪಿ.8- ಕಲಂ 133 ಎಂ ವಿ ಕಾಯ್ದೆಯ ನೋಟೀಸ್

ನಿ.ಪಿ.9- ಕಲಂ 133 ಎಂ ವಿ ಕಾಯ್ದೆಯ ನೋಟೀಸಿಗೆ ಉತ್ತರ

ನಿ.ಪಿ.10- ಅಂತಿಮ ವರದಿ

ನಿ.ಪಿ.11 ರಿಂದ 15-ಒಂದರಿಂದ ಐದನೇ ಅರ್ಜಿದಾರರ ಆಧಾರ್ ಕಾರ್ಡ್ ನ ಮೂಲ ಪ್ರತಿಯನ್ನು ಪರಿಶೀಲಿಸಿದ ನಂತರ ಅದು ಸಾಕ್ಷಿಗೆ ಅವಶ್ಯಕತೆ ಇದೆ ಎಂದು ತಿಳಿಸಿದ ಕಾರಣ ಅದನ್ನು ಹಿಂದಿರುಗಿಸಲಾಯಿತು. ಅದರ ನೋಟರೈಸ್ಡ್ ನಕಲು

ನಿ.ಪಿ.16- ಮೃತರ ವಾಸ ದೃಢೀಕರಣ ಪತ್ರದ ಮೂಲಪ್ರತಿಯನ್ನು ಪರಿಶೀಲಿಸಿದ ನಂತರ ಅದು ಸಾಕ್ಷಿಗೆ ಅವಶ್ಯಕತೆ ಇದೆ ಎಂದು ತಿಳಿಸಿದ ಕಾರಣ ಅದನ್ನು ಹಿಂದಿರುಗಿಸಲಾಯಿತು. ಅದರ ನೋಟರೈಸ್ಡ್ ನಕಲು

**ಪಾಟೀಸವಾಲುಃ ಎರಡನೇ ಎದುರುದಾರರ ಪರ ವಕೀಲರಿಂದ**

1. ನನ್ನ ಗಂಡ ವಿದ್ಯಾಭ್ಯಾಸ ಮಾಡಿರಲಿಲ್ಲ. ನನ್ನ ಗಂಡ ಮೃತಪಟ್ಟಾಗ ಅವರಿಗೆ 41 ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಮೃತರಿಗೆ ನಾನು ಹಾಗೂ ಉಳಿದ ಅರ್ಜಿದಾರರು ವಾರಸುದಾರರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವ ಅವರ ಬೇರೆ ಮಕ್ಕಳೊಂದಿಗೆ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವನಿಗೆ ನನ್ನ ಗಂಡ ಹಾಗೂ ಒಬ್ಬಳು ಮಗಳು ಇದ್ದಾರೆ. ನನ್ನ ಅತ್ತೆ ಮಾವನಿಗೆ ಜಮೀನುಗಳು ಇವೆ ಎಂದರೆ ಸರಿಯಲ್ಲ.

2. ನನ್ನ ಗಂಡ ಪೇಂಟಿಂಗ್ ಗುತ್ತಿಗೆದಾರರ ಕೆಲಸ ಮಾಡಿ ತಿಂಗಳಿಗೆ ರೂ.25,000/- ಸಂಪಾದಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಗುತ್ತಿಗೆದಾರಾಗಿದ್ದರು ಎಂದು ತೋರಿಸಲು ಪರವಾನಗಿ ಹಾಜರುಪಡಿಸಲು ಆಗುವುದಿಲ್ಲ. ನನ್ನ ಗಂಡನ ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಆದಾಯಕ್ಕೆ ಸಂಬಂಧಿಸಿದ ದಾಖಲೆ ಹಾಜರುಪಡಿಸಲು ಆಗುವುದಿಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಗೃಹಿಣಿ. ನನ್ನ ದುಡಿಮೆಯಿಂದಲೇ ನಾನು ಮನೆಯನ್ನು ನಡೆಸುತ್ತಿದ್ದೆನು ಎಂದರೆ ಸರಿಯಲ್ಲ.

3. ನನ್ನ ಗಂಡನೇ ಲಾರಿಯ ಹಿಂಭಾಗಕ್ಕೆ ಹೋಗಿ ಅದರ ಹಿಂಬದಿಯ ಚಕ್ರಕ್ಕೆ ಸಿಕ್ಕಿಕೊಂಡಿದ್ದರು ಎಂದರೆ ಸರಿಯಲ್ಲ. ಅಪಘಾತ ಆದ ಸ್ಥಳದಲ್ಲಿ ಸಿಗ್ನಲ್ ಆಗಲೀ ಅಥವಾ ಕ್ರಾಸ್ ರಸ್ತೆಯಾಗಲೀ ಆಗಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕರ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ಗಂಡನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವನ್ನು ನೋಡಿದವರಿಂದ ಸಾಕ್ಷಿ ಮಾಡಿಸಲು ನೋಡಬೇಕು. ಹೆಚ್ಚಿನ ಪರಿಹಾರ ಸಿಗಲೆಂದು ಪೋಲೀಸರೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಯನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಒಂದನೇ ಎದುರುದಾರರು ಏಕಪಕ್ಷೀಯವಾಗಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ವಾಣಿ ಎ. ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು ಮತ್ತು
ಎಂಎಸಿಟಿ ಸದಸ್ಯರು